**ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಗುಬ್ಬಿ.**

**ಉಪಸ್ಥಿತರು**

ಶ್ರೀಮತಿ. ಸವಿತರಾಣಿ ಹೆಚ್.ವಿ.,
ಬಿ.ಎ. ಎಲ್, ಎಲ್‌ಎಲ್.ಬಿ.,
ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ., ಗುಬ್ಬಿ.

**ದಿನಾಂಕ 03ನೇ ಆಗಸ್ಟ್ 2026**

**ಸಿ.ಸಿ. ಸಂಖ್ಯೆ 680/2025**

| | |
|---|---|
| **ಪಿರ್ಯಾದುದಾರರು** | ಸರ್ಕಾರದ ಪರವಾಗಿ ಸಿ.ಎಸ್.ಪುರ ಪೊಲೀಸ್ ಠಾಣೆ<br><br>**(ಪ್ರತಿನಿಧಿಸುವವರು: ಸಹಾಯಕ ಸರ್ಕಾರಿ ಅಭಿಯೋಜಕರು)** |

**- ವಿರುದ್ದ -**

| | | |
|---|---|---|
| **ಆರೋಪಿ** | 1. | ಶ್ರೀ ಸುರೇಶ ಬಿನ್ ಲೇಟ್ ಸಿದ್ದಲಿಂಗಯ್ಯ,<br>ವಯಸ್ಸು ಸುಮಾರು 42 ವರ್ಷ, |
| | 2. | ಶ್ರೀಮತಿ ಅನಂತಲಕ್ಷ್ಮಿ ಕೋಂ ಸುರೇಶ,<br>ವಯಸ್ಸು ಸುಮಾರು 38 ವರ್ಷ,<br><br>ಇಬ್ಬರೂ ವಾಸ : ಸಿ. ಕೊಡಿಗೇಹಳ್ಳಿ ಮಜರೆ, ವಡ್ಡರಹಟ್ಟಿ ಗ್ರಾಮ, ಹಾಲಿ ವಾಸ : ಸಿ.ಎನ್. ಪಾಳ್ಯ ಗೇಟ್, ಸಿ.ಎಸ್.ಪುರ ಹೋಬಳಿ, ಗುಬ್ಬಿ ತಾಲ್ಲೂಕು.<br><br>**(ಪ್ರತಿನಿಧಿಸುವವರು : ಶ್ರೀ ಬಿ.ವಿ.ಎನ್. ವಕೀಲರು)** |

*****

| | | |
|---|---|---|
| 1. | ಫಿರ್ಯಾದಿ ಹೆಸರು | ಶ್ರೀನಿವಾಸ |
| 2. | ಸಾಕ್ಷ್ಯ ಪ್ರಾರಂಭವಾದ ದಿನ | 16.07.2026 |
| 3. | ಸಾಕ್ಷ್ಯ ಮುಕ್ತಾಯವಾದ ದಿನ | 16.07.2026 |
| 4. | ಆರೋಪಿಸಲಾದ ಕಲಂ | ಭಾರತೀಯ ನ್ಯಾಯ ಸಂಹಿತೆ ಕಲಂ 115(2), 118(1) ಮತ್ತು 352 ಸಹವಾಚಕ ಕಲಂ 3(5) |
| 5. | ನ್ಯಾಯಾಧೀಶರ ಅಭಿಪ್ರಾಯ | ಆರೋಪಿತರು ತಪ್ಪಿತಸ್ಥರಲ್ಲವೆಂದು |
| 6. | ತೀರ್ಪಿನ ದಿನಾಂಕ | 03.08.2026 |

SAVITHARANI H V

Digitally signed by SAVITHARANI H V
Date: 2026.08.03 18:15:28 +0530

**(ಶ್ರೀಮತಿ ಸವಿತರಾಣಿ ಹೆಚ್.ವಿ.)**
**ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಗುಬ್ಬಿ.**

**:: ತೀರ್ಪು ::**

ಈ ಪ್ರಕರಣದ ಫಿರ್ಯಾದಿ ಚಾಸಾ-1 ಶ್ರೀ ಶ್ರೀನಿವಾಸ ಬಿನ್ ಸಿದ್ದಲಿಂಗಯ್ಯ ರವರು ನೀಡಿದ ದೂರಿನ ಮೇರೆಗೆ ಸಿ.ಎಸ್.ಪುರ ಪೊಲೀಸ್ ಠಾಣೆಯ ಪಿ.ಎಸ್.ಐ ರವರು ಮೇಲ್ಕಂಡ ಆರೋಪಿತರ ವಿರುದ್ದ ಭಾರತೀಯ ನ್ಯಾಯ ಸಂಹಿತೆ ಕಲಂ 115(2), 118(1) ಮತ್ತು 352 ಸಹವಾಚಕ ಕಲಂ 3(5) ರಡಿಯಲ್ಲಿ ದಂಡನೀಯ ಆರೋಪಗಳನ್ನು ಹೊರೆಸಿ ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

**2. ದೋಷಾರೋಪಣೆ ಪಟ್ಟಿಯ ಸಂಕ್ಷಿಪ್ತ ಸಾರಾಂಶ ಈ ಕೆಳಕಂಡಂತೆ ಇರುತ್ತದೆ.**

ದಿನಾಂಕ:30-03-2025 ರಂದು ಮಧ್ಯಾಹ್ನ 1-30 ಗಂಟೆ ಸಮಯದಲ್ಲಿ ಸಿ.ಎಸ್.ಪುರ ಪೊಲೀಸ್ ಠಾಣಾ ಸರಹದ್ದಿನ ಸಿ.ಕೊಡಗೇಹಳ್ಳಿ ಮಜರೆ ವಡ್ಡರಹಟ್ಟಿ ಗ್ರಾಮದ ಶನಿದೇವರ ದೇವಸ್ಥಾನದ ಮುಂಭಾಗವಿರುವ ಅತ್ತಿ ಮರದ ಬಳಿ ಚಾ.ಸಾ.2 ಸ್ವಾತಿ ಮತ್ತು ಚಾ.ಸಾ.3 ರಘು ರವರು ಮಾತನಾಡುವಾಗ ಆರೋಪಿತರು ದೇವಸ್ಥಾನದ ಪೂಜಾರಿಕೆಯ ವಿಚಾರದಲ್ಲಿನ ದ್ವೇಷದಿಂದ ಏಕಾಏಕಿ ಚಾ.ಸಾ.2 ರವರಿಗೆ ದೇವಸ್ಥಾನದ ಹತ್ತಿರ ಯಾಕೆ ಬಂದೆ ಎಂದು ಹೇಳಿ ಸೂಳೆ ಮುಂಡೆ ಬೋಳಿ ಮುಂಡೆ ಎಂದು ಅವಾಚ್ಯ ಶಬ್ದಗಳಿಂದ ಬೈದು, ಕೈಗಳಿಂದ ಸಾಕ್ಷಿ 2 ರವರ ಎಡಗೈ ಹಿಂಭಾಗದಲ್ಲಿ, ಬಲಗೈ ಹಿಂಭಾಗದಲ್ಲಿ ಮತ್ತು ಬಲಗೈ ಅಂಗೈ ಯಲ್ಲಿ ಹಲವು ಕಡೆ ಉಜ್ಜಿರುವಂತೆ ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿದ್ದು, ಅಲ್ಲಿಗೆ ಬಂದ ಸಾಕ್ಷಿ 1 ರವರಿಗೆ 1ನೇ ಆರೋಪಿಯು ಕುಡುಗೋಲಿನ ಹಿಂಭಾಗದಿಂದ ತಲೆಯ ನೆತ್ತಿಯ ಮದ್ಯಭಾಗಕ್ಕೆ ಹೊಡೆದು 6ಸೆಂ.ಮೀ ಉದ್ದದ ಸಾಮಾನ್ಯ ಸ್ವರೂಪದ ಗಾಯ ಮಾಡಿದ್ದು, 2ನೇ ಆರೊಪಿಯು ದೊಣ್ಣೆಯಿಂದ ಸಾಕ್ಷಿ 1ರವರ ಎಡಗೈನ ಮುಂದೋಳಿನ ಹಿಂಭಾಗಕ್ಕೆ ಹೊಡೆದು 6 ಸಂ.ಮೀ ಉದ್ದ ಕತ್ತರಿಸಿದಂತೆ ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿದ್ದು, ಬಲಮೊಣಕಾಲಿನ ಕಳೆಗಡೆ 3 ಇಂಟು 1 ಸೆಂ.ಮೀ ಉದ್ದದ ಉಜ್ಜಿರುವಂತೆ ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿರುತ್ತಾರೆ ಎಂಬುದಾಗಿರುತ್ತದೆ. ಆದ ಕಾರಣ ಆರೋಪಿತರು ಭಾರತೀಯ ನ್ಯಾಯ ಸಂಹಿತೆ ಕಲಂ 115(2), 118(1) ಮತ್ತು 352 ಸಹವಾಚಕ ಕಲಂ 3(5)ರಡಿಯಲ್ಲಿ ಅಪರಾಧ ಎಸಗಿರುತ್ತಾರೆ ಎಂಬುದಾಗಿರುತ್ತದೆ.

**3.** ತನಿಖಾಧಿಕಾರಿಗಳು ತನಿಖಾ ಕಾರ್ಯ ಪೂರ್ಣಗೊಳಿಸಿ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ್ದು, ನ್ಯಾಯಾಲಯವು ಭಾರತೀಯ ನ್ಯಾಯ ಸಂಹಿತೆ

ಕಲಂ 115(2), 118(1) ಮತ್ತು 352 ಸಹವಾಚಕ ಕಲಂ 3(5)ರಡಿಯಲ್ಲಿ ಅಪರಾಧಗಳಿಗೆ ಸಂಜ್ಞೇಯತೆಯನ್ನು ತೆಗೆದುಕೊಂಡಿರುತ್ತದೆ.

**4.** ಆರೋಪಿತರಿಗೆ ನ್ಯಾಯಾಲಯದಿಂದ ಜಾಮೀನು ಮಂಜೂರಾಗಿದ್ದು, ನ್ಯಾಯಾಲಯವು ಭಾರತೀಯ ನ್ಯಾಯ ಸುರಕ್ಷಾ ಸಂಹಿತೆ ಕಲಂ 230 ರಂತೆ ಆರೋಪಿತರಿಗೆ ದೋಷಾರೋಪಣಾ ಪಟ್ಟಿಯ ನಕಲನ್ನು ಜಾರಿಗೊಳಿಸಿದೆ.

**5.** ಆರೋಪಿತರ ವಿರುದ್ಧ ಭಾರತೀಯ ನ್ಯಾಯ ಸಂಹಿತೆ ಕಲಂ 115(2), 118(1) ಮತ್ತು 352 ಸಹವಾಚಕ ಕಲಂ 3(5) ರಡಿಯಲ್ಲಿ ಅಪರಾಧಗಳಿಗೆ ದೋಷಾರೋಪಣೆಯನ್ನು ರಚಿಸಿ ಓದಿ ವಿವರಿಸಿ ಹೇಳಿದ್ದು, ಆರೋಪಿತರು ತಾವು ತಪ್ಪು ಮಾಡಿರುವುದಿಲ್ಲವೆಂದು ಹಾಗೂ ವಿಚಾರಣೆ ಆಗಬೇಕೆಂದು ಉತ್ತರಿಸಿರುತ್ತಾರೆ.

**6.** ಅಭಿಯೋಜನಾ ಪಕ್ಷದವರು ಆರೋಪಿತರ ವಿರುದ್ಧ ಮಾಡಿರುವ ಆರೋಪಗಳನ್ನು ರುಜುವಾತುಪಡಿಸಲು ತಮ್ಮ ಪರವಾಗಿ ಚಾಸಾ-1 ರವರನ್ನು ಪ್ರಾಸಾ-1 ಎಂಬುದಾಗಿ, ಚಾಸಾ-2 ರವರನ್ನು ಪ್ರಾಸಾ-2 ಎಂಬುದಾಗಿ ವಿಚಾರಣೆಗೆ ಒಳಪಡಿಸಿ, ನಿಪಿ.1 ಮತ್ತು ನಿಪಿ. 2 ರಂತೆ ದಾಖಲೆಗಳನ್ನು ಗುರ್ತಿಸಿಕೊಂಡಿರುತ್ತಾರೆ. ಪ್ರಕರಣದ ಪ್ರಮುಖ ಸಾಕ್ಷಿ ಎನ್ನಲಾದ ಪ್ರಾಸಾ.1 ಮತ್ತು ಪ್ರಾಸಾ.2 ರವರು ಅಭಿಯೋಜನೆಯವರ ಪ್ರಕರಣಕ್ಕೆ ಪ್ರತಿಕೂಲವಾಗಿ ತಿರುಗಿದ್ದು, ಉಳಿದ ಸಾಕ್ಷಿದಾರರ ವಿಚಾರಣೆಯಿಂದ ಯಾವುದೇ ಫಲ ಇಲ್ಲ ಎಂಬುದನ್ನು ಮನಗಂಡು ಅಭಿಯೋಜನೆಯವರ ಮನವಿಯನ್ನು ತಿರಸ್ಕರಿಸಿ ಉಳಿದ ಸಾಕ್ಷಿದಾರರ ವಿಚಾರಣೆಯನ್ನು ಕೈ ಬಿಡಲಾಯಿತು. ಆರೋಪಿತರ ವಿರುದ್ಧ ಹಾಗೂ ಆಪಾದನೆಗಳಿಗೆ ಪೂರಕವಾಗಿ ಯಾವುದೇ ಸಾಕ್ಷ್ಯವಿಲ್ಲದ ಕಾರಣ ಆರೋಪಿತರಿಗೆ ಭಾರತೀಯ ನ್ಯಾಯ ಸುರಕ್ಷಾ ಸಂಹಿತೆ ಕಲಂ 351 ರಡಿಯಲ್ಲಿ ವಿಚಾರಣೆಗೆ ಒಳಪಡಿಸುವುದನ್ನು ಕೈಬಿಡಲಾಯಿತು. ನಂತರ ಉಭಯ ಪಕ್ಷಗಾರರ

ವಾದವನ್ನು ಆಲಿಸಲಾಯಿತು ಮತ್ತು ಪ್ರಕರಣದಲ್ಲಿ ಇರುವಂತಹ ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸಲಾಯಿತು.

**7.** ಅಭಿಯೋಜನಾ ಪಕ್ಷದವರು ಆರೋಪಿತರ ವಿರುದ್ದ ಮಾಡಿರುವ ಆರೋಪಗಳ ರೀತ್ಯಾ ನ್ಯಾಯಾಲಯದ ತೀರ್ಮಾನಕ್ಕೆ ಉದ್ಭವಿಸುವ ಅಂಶಗಳು ಯಾವುವು ಎಂದರೆ:

**ಅಂಶಗಳು**

1. ದಿನಾಂಕ:30-03-2025 ರಂದು ಮಧ್ಯಾಹ್ನ 01-30 ಗಂಟೆ ಸಮಯದಲ್ಲಿ ಸಿ.ಎಸ್.ಪುರ ಪೋಲೀಸ್ ಠಾಣಾ ಸರಹದ್ದಿಗೆ ಸೇರಿದ ಸಿ.ಕೊಡಗೇಹಳ್ಳಿ ಮಜರೆ ವಡ್ಡರಹಟ್ಟಿ ಗ್ರಾಮದ ಶನಿದೇವರ ದೇವಸ್ಥಾನದ ಮುಂಭಾಗವಿರುವ ಅತ್ತಿ ಮರದ ಬಳಿ ಸಾಕ್ಷಿ 2 ಸ್ವಾತಿ ಮತ್ತು ಸಾಕ್ಷಿ 3 ರಘು ರವರು ಮಾತನಾಡುವಾಗ ಆರೋಪಿತರು ದೇವಸ್ಥಾನದ ಪೂಜಾರಿಕೆಯ ವಿಚಾರದಲ್ಲಿನ ದ್ವೇಷದಿಂದ ಏಕಾಏಕಿ ಸಾಕ್ಷಿ 2 ರವರಿಗೆ ದೇವಸ್ಥಾನದ ಹತ್ತಿರ ಯಾಕೆ ಬಂದೆ ಸೂಳೆ ಮುಂಡೆ, ಬೋಳಿ ಮುಂಡೆ ಎಂದು ಅವಾಚ್ಯ ಶಬ್ದಗಳಿಂದ ಬೈದು ಶಾಂತಿ ಭಂಗವನ್ನುಂಟು ಮಾಡಿದ್ದು, ಆ ಮೂಲಕ ಭಾರತೀಯ ನ್ಯಾಯ ಸಂಹಿತೆ ಕಲಂ 352 ಸಹವಾಚಕ ಕಲಂ 3(5) ರಡಿಯಲ್ಲಿ ಅಪರಾಧವೆಸಗಿದ್ದಾರೆ ಎಂದು ಅಭಿಯೋಜನೆಯವರು ಸಂಶಯಾತೀತವಾಗಿ ರುಜುವಾತುಪಡಿಸಿದ್ದಾರೆಯೇ?

2. ಎರಡನೇಯದಾಗಿ, ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ, ಆರೋಪಿತರು ಸಮಾನ ಉದ್ದೇಶದಿಂದ ಕೈಗಳಿಂದ ಸಾಕ್ಷಿ 2 ರವರ ಎಡಗೈಯ ಹಿಂಭಾಗದಲ್ಲಿ, ಬಲಗೈ ಹಿಂಭಾಗದಲ್ಲಿ ಮತ್ತು ಬಲಗೈ ಅಂಗೈಯಲ್ಲಿ ಹಾಗೂ ಬಲಮೊಣಕಾಲಿನ ಕೆಳಗಡೆ 3 ಇಂಟು 1 ಸೆಂ.ಮೀ ನಷ್ಟು ಉದ್ದದ ಉಜ್ಜಿರುವಂತೆ ಸಾಮಾನ್ಯ ಸ್ವರೂಪದ ನೋವುಂಟು ಮಾಡಿದ್ದು, ಆ ಮೂಲಕ ಭಾರತೀಯ ನ್ಯಾಯ ಸಂಹಿತೆ ಕಲಂ 115(2) ಸಹವಾಚಕ ಕಲಂ 3(5) ರ

ಅಡಿಯಲ್ಲಿ ಅಪರಾಧವೆಸಗಿದ್ದಾರೆ ಎಂದು ಅಭಿಯೋಜನೆಯವರು ಸಂಶಯಾತೀತವಾಗಿ ರುಜುವಾತುಪಡಿಸಿದ್ದಾರೆಯೇ?

3. ಕೊನೆಯದಾಗಿ, ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ, 1ನೇ ಆರೋಪಿತರು ಸಮಾನ ಉದ್ದೇಶದಿಂದ ಸಾಕ್ಷಿ 1 ರವರಿಗೆ ಕುಡುಗೋಲಿನ ಹಿಂಭಾಗದಿಂದ ತಲೆಯ ನೆತ್ತಿಯ ಮಧ್ಯಭಾಗಕ್ಕೆ ಹೊಡೆದು 6 ಸೆಂ.ಮೀ ನಷ್ಟು ಉದ್ದದ ಸಾಮಾನ್ಯ ಸ್ವರೂಪದ ಗಾಯವನ್ನು ಹಾಗೂ 2ನೇ ಆರೋಪಿಯಾದ ನೀವು ದೊಣ್ಣೆಯಿಂದ ಸಾಕ್ಷಿ 1 ರವರ ಎಡಗೈ ಮುಂದೋಳಿನ ಹಿಂಭಾಗಕ್ಕೆ ಹೊಡೆದು 6 ಸೆಂ.ಮೀ ನಷ್ಟು ಉದ್ದ ಕತ್ತರಿಸಿದಂತೆ ಸಾಮಾನ್ಯ ಸ್ವರೂಪದ ಗಾಯಗಳನ್ನುಂಟು ಮಾಡಿದ್ದು, ಆ ಮೂಲಕ ಭಾರತೀಯ ನ್ಯಾಯ ಸಂಹಿತ ಕಲಂ 118(1) ಸಹವಾಚಕ ಕಲಂ 3(5) ರ ಅಡಿಯಲ್ಲಿ ಅಪರಾಧವೆಸಗಿದ್ದಾರೆ ಎಂದು ಅಭಿಯೋಜನೆಯವರು ಸಂಶಯಾತೀತವಾಗಿ ರುಜುವಾತುಪಡಿಸಿದ್ದಾರೆಯೇ?

4. ಏನು ಆದೇಶ ?

**8**. ನ್ಯಾಯಾಲಯದ ತೀರ್ಮಾನಕ್ಕೆ ಉದ್ಭವಿಸಿರುವ ಮೇಲ್ಕಂಡ ಅಂಶಗಳಿಗೆ, ನ್ಯಾಯಾಲಯವು ಈ ಕೆಳಕಂಡಂತೆ ಉತ್ತರಿಸಲಾಗಿರುತ್ತದೆ.

| | | |
|---|---|---|
| ಅಂಶ 1 | : | **ನಕಾರಾತ್ಮಕವಾಗಿ** |
| ಅಂಶ 2 | : | **ನಕಾರಾತ್ಮಕವಾಗಿ** |
| ಅಂಶ 3 | : | **ನಕಾರಾತ್ಮಕವಾಗಿ** |
| ಅಂಶ 4 | : | **ಅಂತಿಮ ಆದೇಶದಂತೆ** |

**:: ಕಾರಣಗಳು ::**

**9. ಅಂಶ 1 ರಿಂದ 3: -** ಈ ಮೂರು ಅಂಶಗಳು ಒಂದಕ್ಕೊಂದು ಪೂರಕವಾಗಿರುವ ಕಾರಣ, ಪುನರಾವರ್ತನೆಯನ್ನು ತಪ್ಪಿಸುವ ಸಲುವಾಗಿ ಈ ಮೂರು ಅಂಶಗಳನ್ನು ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

ಅಭಿಯೋಜನೆಯವರ ಪ್ರಕಾರ, ದಿನಾಂಕ:30-03-2025 ರಂದು ಮಧ್ಯಾಹ್ನ 1-30 ಗಂಟೆ ಸಮಯದಲ್ಲಿ ಸಿ.ಎಸ್.ಪುರ ಪೊಲೀಸ್ ಠಾಣಾ ಸರಹದ್ದಿನ ಸಿ.ಕೊಡಗೇಹಳ್ಳಿ ಮಜರೆ ವಡ್ಡರಹಟ್ಟಿ ಗ್ರಾಮದ ಶನಿದೇವರ ದೇವಸ್ಥಾನದ ಮುಂಭಾಗವಿರುವ ಅತ್ತಿ ಮರದ ಬಳಿ ಚಾ.ಸಾ.2 ಸ್ವಾತಿ ಮತ್ತು ಚಾ.ಸಾ.3 ರಘು ರವರು ಮಾತನಾಡುವಾಗ ಆರೋಪಿತರು ದೇವಸ್ಥಾನದ ಪೂಜಾರಿಕೆಯ ವಿಚಾರದಲ್ಲಿನ ದ್ವೇಷದಿಂದ ಏಕಾಏಕಿ ಚಾ.ಸಾ.2 ರವರಿಗೆ ದೇವಸ್ಥಾನದದಿ ಹತ್ತಿರ ಯಾಕೆ ಬಂದೆ ಎಂದು ಹೇಳಿ ಸೂಳೆ ಮುಂಡೆ ಬೋಳಿ ಮುಂಡೆ ಎಂದು ಅವಾಚ್ಯ ಶಬ್ದಗಳಿಂದ ಬೈದು, ಕೈಗಳಿಂದ ಸಾಕ್ಷಿ 2 ರವರ ಎಡಗೈ ಹಿಂಭಾಗದಲ್ಲಿ, ಬಲಗೈ ಹಿಂಭಾಗದಲ್ಲಿ ಮತ್ತು ಬಲಗೈ ಅಂಗೈ ಯಲ್ಲಿ ಹಲವು ಕಡೆ ಉಜ್ಜಿರುವಂತೆ ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿದ್ದು, ಲ್ಲಿಗೆ ಬಂದ ಸಾಕ್ಷಿ 1 ರವರಿಗೆ 1ನೇ ಆರೋಪಿಯು ಕುಡುಗೋಲಿನ ಹಿಂಭಾಗದಿಂದ ತಲೆಯ ನೆತ್ತಿಯ ಮದ್ಯಭಾಗಕ್ಕೆ ಹೊಡೆದು 6ಸೆಂ.ಮೀ ಉದ್ದದ ಸಾಮಾನ್ಯ ಸ್ವರೂಪದ ಗಾಯ ಮಾಡಿದ್ದು, 2ನೇ ಆರೊಪಿಯು ದೊಣ್ಣೆಯಿಂದ ಸಾಕ್ಷಿ 1ರವರ ಎಡಗೈನ ಮುದೋಳಿನ ಹಿಂಭಾಗಕ್ಕೆ ಹೊಡೆದು 6 ಸಂ.ಮೀ ಉದ್ದ ಕತ್ತರಿಸಿದಂತೆ ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿದ್ದು, ಬಲಮೊಣಕಾಲಿನ ಕಳೆಗಡೆ 3 ಇಂಟು 1 ಸೆಂ.ಮೀ ಉದ್ದದ ಉಜ್ಜಿರುವಂತೆ ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿರುತ್ತಾರೆ ಎಂಬುದಾಗಿರುತ್ತದೆ. ಆದ ಕಾರಣ ಆರೋಪಿತರು ಭಾರತೀಯ ನ್ಯಾಯ ಸಂಹಿತೆ ಕಲಂ 115(2), 118(1) ಮತ್ತು 352 ಸಹವಾಚಕ ಕಲಂ 3(5)ರಡಿಯಲ್ಲಿ ಅಪರಾಧ ಎಸಗಿರುತ್ತಾರೆ ಎಂಬುದಾಗಿರುತ್ತದೆ.

**10.** ಈ ಪ್ರಕರಣದಲ್ಲಿ ಅಭಿಯೋಜನಾ ಪಕ್ಷದವರು ತಮ್ಮ ಜವಾಬ್ದಾರಿಯನ್ನು ನಿರ್ವಹಿಸುವ ಸಲುವಾಗಿ ಈ ಪ್ರಕರಣದ ದೂರುದಾರರು ಮತ್ತು ಗಾಯಾಳುವಾದ ಪ್ರಾ.ಸಾ.1 ಮತ್ತು ಗಾಯಾಳು ಸಾಕ್ಷಿದಾರರಾದ ಪ್ರಾ.ಸಾ.2ರವರನ್ನು ವಿಚಾರಣೆಗೆ ಒಳಪಡಿಸಿದ್ದು, ದೂರನ್ನು ನಿ.ಪಿ.1 ಎಂದು, ಪಂಚನಾಮೆಯನ್ನು ನಿ.ಪಿ.2 ಎಂಬುದಾಗಿ ಗುರ್ತಿಸಿಕೊಂಡಿರುತ್ತಾರೆ. ಪ್ರಾ.ಸಾ.1 ಮತ್ತು ಪ್ರಾ.ಸಾ.2 ರವರು ದೂರುದಾರರು ಹಾಗೂ ಗಾಯಾಳು ಸಾಕ್ಷಿದಾರರಾಗಿದ್ದು, ಇವರು ಅಭಿಯೋಜನೆಯವರಿಗೆ ಪ್ರಮುಖ ಸಾಕ್ಷಿದಾರರಾಗಿರುತ್ತಾರೆ. ಆದರೆ ಇವರು ತಮ್ಮ ನುಡಿ ಸಾಕ್ಷ್ಯದಲ್ಲಿ ಸಂಪೂರ್ಣವಾಗಿ ಅಭಿಯೋಜನೆಯವರ ಪ್ರಕರಣಕ್ಕೆ ಪ್ರತಿಕೂಲವಾಗಿ ಸಾಕ್ಷ್ಯವನ್ನು ನುಡಿದಿರುತ್ತಾರೆ. ಅಭಿಯೋಜನೆಯವರು ಪಾಟೀ ಸವಾಲು ಮಾಡಿದಾಗಲೂ ಸಹಾ ಅಭಿಯೋಜನೆಯವರಿಗೆ ಪೂರಕವಾಗಿ ಸಾಕ್ಷ್ಯ ನುಡಿದಿರುವುದಿಲ್ಲ. ಸದರಿಯವರ ಸಾಕ್ಷ್ಯವನ್ನು ಗಮನಿಸಿದಾಗ, ಪ್ರಾ.ಸಾ 1 ಮತ್ತು 2 ಹಾಗೂ ಆರೋಪಿತರು ಪರಸ್ಪರ ಸಂಬಂಧಿಕರಾಗಿದ್ದು, ಇವರು ನ್ಯಾಯಾಲಯದ ಹೊರಗಡೆ ರಾಜಿ ಮಾಡಿಕೊಂಡು ತಮ್ಮ ವೈಮನಸ್ಸಿಗೆ ಪೂರ್ಣವಿರಾಮ ನೀಡಿರುತ್ತಾರೆ ಎಂಬುದು ಕಂಡುಬರುತ್ತದೆ.

**11.** ನ್ಯಾಯಾಲಯದಲ್ಲಿ ಹಾಜರುಪಡಿಸಲಾದ ಸಾಕ್ಷ್ಯವನ್ನು ಅವಲೋಕನ ಮಾಡಿ ನೋಡಿದಾಗ, ಕೃತ್ಯಕ್ಕೆ ಪ್ರಮುಖ ಸಾಕ್ಷಿದಾರರಾದ ಪ್ರಾ.ಸಾ.1 ಮತ್ತು ಪ್ರಾ.ಸಾ.2 ರವರು ಅಭಿಯೋಜನೆ ಪರ ಪ್ರತಿಕೂಲ ಸಾಕ್ಷಿಯಾಗಿ ಪರಿಣಮಿಸಿದ್ದು ಹಾಗೂ ಇವರು ದೂರುದಾರರು ಹಾಗೂ ಗಾಯಾಳು ಹಾಗೂ ಪ್ರತ್ಯಕ್ಷ ಸಾಕ್ಷಿದಾರರಾಗಿದ್ದರು ಅಭಿಯೋಜನೆಯನ್ನು ಬೆಂಬಲಿಸದಿದ್ದ ಕಾರಣ ಉಳಿದ ಸಾಕ್ಷಿದಾರರನ್ನು ವಿಚಾರಣೆ ಮಾಡುವುದರಿಂದ ಯಾವುದೇ ಪ್ರಯೋಜನ ಇಲ್ಲವೆಂದು ಪರಿಗಣಿಸಿ ಅಭಿಯೋಜನೆಯವರು ಉಳಿದ ಸಾಕ್ಷಿದಾರರಿಗೆ ಸಮನ್ಸ್ ನೀಡಿ ಎನ್ನುವ ಕೋರಿಕೆಯನ್ನು ತಿರಸ್ಕರಿಸಲಾಗಿರುತ್ತದೆ. ಹೀಗಾಗಿ, ಪ್ರಾ.ಸಾ.1 ಮತ್ತು ಪ್ರಾ.ಸಾ.2 ರವರ ಸಾಕ್ಷ್ಯವು ಆರೋಪಿತರ ಮೇಲೆ ಆರೋಪಿಸಿರುವಂತಹ ಆರೋಪಗಳನ್ನು ಆರೋಪಿತರೇ ಎಸಗಿದ್ದಾರೆ ಎಂಬುದನ್ನು ರುಜುವಾತುಪಡಿಸಲು ಸಹಾಯಕಾರಿ ಆಗಿರುವುದಿಲ್ಲವೆಂದು ಈ ನ್ಯಾಯಾಲಯವು ಅಭಿಪ್ರಾಯ ಪಡುತ್ತಾ ಹಾಗೂ ಸದರಿ ಸಾಕ್ಷಿಗಳ ಸಾಕ್ಷ್ಯದಿಂದುಂಟಾಗುವ ಅನುಮಾನದ ಲಾಭವನ್ನು ಆರೋಪಿತರಿಗೆ

ನೀಡುತ್ತಾ, ಆರೋಪಿತರ ಮೇಲಿರುವ ಆರೋಪಗಳನ್ನು ಸಾಭೀತುಪಡಿಸಲು ಅಭಿಯೋಜನೆಯು ಸಂಪೂರ್ಣವಾಗಿ ವಿಫಲರಾಗಿರುತ್ತಾರೆಂದು ಅಂಶ ಸಂಖ್ಯೆ-1 ರಿಂದ 3ನ್ನು ನಕಾರಾತ್ಮಕವಾಗಿ ಉತ್ತರಿಸಿರುತ್ತೇನೆ.

**12. <u>ಅಂಶ 4 :</u>** ಈ ಮೇಲ್ಕಂಡಂತೆ ಚರ್ಚಿಸಿ ಬಂದ ನಿರ್ಣಯದಂತೆ, ಈ ನ್ಯಾಯಾಲಯವು ಕೆಳಕಂಡಂತೆ ಆದೇಶಿಸುತ್ತದೆ.

:: **<u>ಆದೇಶ ::</u>**

ಭಾರತೀಯ ನ್ಯಾಯ ಸುರಕ್ಷಾ ಸಂಹಿತೆ ಕಲಂ 271(1)ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ ಆರೋಪಿತರ ವಿರುದ್ಧ ಭಾರತೀಯ ನ್ಯಾಯ ಸಂಹಿತೆ ಕಲಂ 115(2), 118(1) ಮತ್ತು 352 ಸಹವಾಚಕ ಕಲಂ 3(5) ರಡಿಯಲ್ಲಿ ಹೊರೆಸಲಾದ ಆರೋಪಗಳು ಸಾಬೀತಾಗದ ಕಾರಣ ಆರೋಪಿತರನ್ನು ದೋಷಮುಕ್ತರನ್ನಾಗಿ ಪರಿಗಣಿಸಿ ಬಿಡುಗಡೆ ಮಾಡಲಾಗಿದೆ.

ಆರೋಪಿತರು ಹಾಗೂ ಜಾಮೀನುದಾರರು ಬರೆದುಕೊಟ್ಟಂತಹ ಮುಚ್ಚಳಿಕೆ ಪತ್ರವನ್ನು ತಕ್ಷಣದಿಂದ ರದ್ದುಪಡಿಸಲಾಗಿದೆ.

ಭಾರತೀಯ ನ್ಯಾಯ ಸುರಕ್ಷಾ ಸಂಹಿತೆ ಕಲಂ 481 ರಡಿಯಲ್ಲಿ ರೀತ್ಯಾ ಆರೋಪಿತರು ಒದಗಿಸಿರುವ ಜಾಮೀನು ಇನ್ನು 6 ತಿಂಗಳುಗಳ ಕಾಲ ಚಾಲ್ತಿಯಲ್ಲಿರುತ್ತದೆ.

(ಶೀಘ್ರಲಿಪಿಗಾರರಿಗೆ ಗಣಕಯಂತ್ರದ ಮೂಲಕ ನೇರವಾಗಿ ಉಕ್ತಲೇಖನ ನೀಡಿ, ಬಳಿಕ ಅನುಲಿಪಿಯನ್ನು ಪರಿಶೀಲಿಸಿ ತಿದ್ದಿ ಬಹಿರಂಗ ನ್ಯಾಯಾಲಯದಲ್ಲಿ ಈ ದಿನ ಅಂದರೆ **ದಿನಾಂಕ: 03.08.2026** ರಂದು ಘೋಷಿಸಿದ್ದೇನೆ)

SAVITHARANI H V
Digitally signed by SAVITHARANI H V
Date: 2026.08.03 18:15:44 +0530

(ಶ್ರೀಮತಿ ಸವಿತರಾಣಿ ಹೆಚ್.ವಿ.)
ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಗುಬ್ಬಿ.

**:: ಅನುಬಂಧ ::**

**1.ಅಭಿಯೋಜನೆಯ ಪರ ವಿಚಾರಣೆಗೊಳಪಟ್ಟ ಸಾಕ್ಷಿದಾರರು:**

ಪ್ರಾಸಾ : 1 : ಶ್ರೀ ಶ್ರೀನಿವಾಸ.
ಪ್ರಾಸಾ : 2 : ಶ್ರೀಮತಿ ಸ್ವಾತಿ

**2. ಅಭಿಯೋಜನೆಯ ಪರ ಗುರ್ತಿಸಲ್ಪಟ್ಟ ದಾಖಲೆಗಳು:**

ನಿಪಿ : 1 : ದೂರು
ನಿಪಿ : 2 : ಪಂಚನಾಮೆ

**3. ಅಭಿಯೋಜನೆಯ ಪರ ಗುರ್ತಿಸಲ್ಪಟ್ಟ ಮುದ್ದೆಮಾಲುಗಳು:**

- ಇರುವುದಿಲ್ಲ -

**4. ಆರೋಪಿತರ ಪರ ವಿಚಾರಣೆಗೊಳಪಟ್ಟ ಸಾಕ್ಷಿದಾರರು:**

- ಇರುವುದಿಲ್ಲ -

**5. ಆರೋಪಿತರ ಪರ ಗುರ್ತಿಸಲ್ಪಟ್ಟ ದಾಖಲೆಗಳು:**

- ಇರುವುದಿಲ್ಲ -

SAVITHARANI H V
Digitally signed by SAVITHARANI H V
Date: 2026.08.03 18:15:50 +0530

(ಶ್ರೀಮತಿ ಸವಿತರಾಣಿ ಹೆಚ್.ವಿ.)
ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಗುಬ್ಬಿ.